ವಿ. ಹೇಮಂತಕುಮಾರ್, ಬೆಂಗಳೂರು
ದೇವ ಮಂದಿರಕ್ಕೂ, ನ್ಯಾಯಮಂದಿರಕ್ಕೂ ವ್ಯತ್ಯಾಸವೇನು ಸಾರ್?



ಎಣ್ಣೆ ಹಾಕಿ ಬತ್ತಿ ಇಟ್ಟು ಕಿಡಿ ಮುಟ್ಟಿಸುವವರಿಗೆ ಇಲ್ಲಿ ದೀರ್ಘದಂಡ, ಅಲ್ಲಿ ದೀರ್ಘ ದಂಡನೆ.

ಎಚ್.ಕೆ. ಸುಂದರ ರಾವ್, ಬೆಂಗಳೂರು
ವಯಸ್ಸಿಗೂ ಆಯಸ್ಸಿಗೂ ಇರುವ ವ್ಯತ್ಯಾಸವೇನು?
ವಯಸ್ಸು ಇಂಟರ್‌ವೆಲ್, ಆಯಸ್ಸು ಶುಭಂ.

ಚನ್ನಬಸವ ಪುತ್ತೂರು, ಚಿತ್ರದುರ್ಗ
ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ವರ್ಷಕ್ಕೆ ತಮ್ಮ ಕೊಡುಗೆ ಏನು ಗುರುವೆ?
ಹ್ಞ! ಗೀತೆ ಮುಟ್ಟಿ ಸುಳ್ಳಾಡುವವರ ದೇಶದ್ದು ಅಮೃತ ಮಹೋತ್ಸವ ಅಲ್ಲ, ಅನೃತ ಮಹೋತ್ಸವ.

ಮಹಾವೀರ ಕಾಸರ, ಶಿವಮೊಗ್ಗ
ತಾಳಿ ಕಟ್ಟುವಾಗ ಗಟ್ಟಿಮೇಳ ಎಂದು ಹೇಳುವುದೇಕೆ?



ಆ ಕ್ಷಣದಿಂದ ಅಂತಹ ಗದ್ದಲ, ಗೊಂದಲಗಳು ಜೀವನದ ಅವಿಭಾಜ್ಯ ಅಂಗಗಳೆಂದು ಸೂಚಿಸಲು.

ಪಾರ್ವತಿ ರಮೇಶ್, ಮೈಸೂರು
ಕೊರೊನಾದಿಂದ ಗತಿಸಿದ ಕರೋಡ್‌ಪತಿಯ ಅಂತ್ಯಕ್ರಿಯೆಗೆ ರಕ್ತಸಂಬಂಧಿಗಳೂ ಬರಲಿಲ್ಲವಲ್?
ಒಂದು ನರಿಗೆ ಗುಂಡಿಕ್ಕಿದಾಗ ಮಿಕ್ಕವು ಓಡುವುದು ಪ್ರಾಣಿಗಳ ಸಹಜ ಗುಣ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಪ್ರಿಯತಮೆ ಮೊಟ್ಟಮೊದಲು ಕೈ ಹಿಡಿದಾಗ ಶುಕ್ರದಂತೆ. ಬರಬರುತ್ತಾ ಶನಿಯಂತೆ. ಏಕೆ ಹೀಗೆ?
ಮೊದಲು ಆರ್ದ್ರ ನಕ್ಷತ್ರದಂತಿದ್ದ ಪ್ರಿಯತಮ ಮೃಗಶಿರನಂತೆ ಬದಲಾಗುವುದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ವ್ಯಕ್ತಿ ಮುಖ್ಯವೋ, ವ್ಯಕ್ತಿತ್ವ ಮುಖ್ಯವೋ?
ಹೊಸ್ತಿಲಿನೊಳಗೆ ವ್ಯಕ್ತಿ, ಹೊಸ್ತಿಲ ಹೊರಗೆ ವ್ಯಕ್ತಿತ್ವ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ನಗರಗಳು ಬೆಳೆದಂತೆ ಬಾರ್‌ಗಳು ಹೆಚ್ಚುವುದೇಕೆ?
ರಫಿಯ ‘ಬಾರ್ ಬಾರ್ ದೇಖೋ; ಹಜಾರ್ ಬಾರ್ ದೇಖೋ’ ಹಾಡಿನ ಸಾಲಿನ ಪ್ರೇರಣೆಯಂತೆ.

ಆರ್. ಮಧುಸೂದನ್, ಹಾಸನ
ಅಂದು ಮದುಮಗಳು ‘ನಾಚಿ’ ಹಸೆಮಣೆಯತ್ತ ಹೆಜ್ಜೆ ಇಡುತ್ತಿದ್ದಳು. ಈಗ ಡ್ಯಾನ್ಸ್ ಮಾಡುತ್ತಾ ಬರುತ್ತಾಳೆ. ಕಾರಣವೇನು?
ಈಗಿನ ಕಾಲದವಳಿಗೆ ಹಿಂದಿ ಭಾಷೆ ತಿಳಿದಿರುವುದರಿಂದ ನಾಚೆಂದರೆ ನರ್ತಿಸುತ್ತಾಳೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ದೇವಸ್ಥಾನದ ಪ್ರಸಾದ ಅಷ್ಟೇಕೆ ರುಚಿ ಇರುತ್ತೆ ಸಾರ್?
ದೇವಸ್ಥಾನದ ದಿನಸಿ, ಪಾತ್ರೆ, ಅಡಿಗೆಯವರು ಶುಚಿಯಾಗಿರುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
ಕೊರೊನಾ ಶಕೆಯಲ್ಲಿ ಬಂಗಾರದ ಜಾಹೀರಾತು ಹೆಚ್ಚು ಮೆರೆಯುತ್ತಿರಲು ಕಾರಣವೇನು?
ಜನ ಹೊರಹೋಗದೆ ಉಳಿಸಿರುವ ದುಡ್ಡನ್ನು ಗಳಿಸಲು ಇದು ಚಿನ್ನದವರಿಗೆ ಸುವರ್ಣಾವಕಾಶ.

ತಲಕಾಡು ಶ್ರೀನಿಧಿ, ಬೆಂಗಳೂರು
ಸುಳ್ಳನ್ನು ಸುಲಭವಾಗಿ ನಂಬುವವರು ಸತ್ಯದ ಹೇಳಿಕೆಗಳನ್ನು ಅನುಮಾನಿಸುವುದೇಕೆ?
ಅಪರೂಪದ್ದನ್ನು ಅನುಮಾನದಿಂದ ಕಾಣುವುದು ಸಹಜ.

ಎಂ.ಎ. ಕುಮಾರ್, ಬೆಂಗಳೂರು
ದೇವರನ್ನು ಪ್ರತ್ಯಕ್ಷವಾಗಿ ಯಾರೂ ಕಂಡಿಲ್ಲದಿದ್ದರೂ ದೇವರಲ್ಲಿ ಭಕ್ತಿ ಗೌರವ ಹುಟ್ಟಿಕೊಂಡಿದ್ದು ಹೇಗೆ?
ಹಿರಿಯರು ತೋರಿದ್ದನ್ನು ಪ್ರಶ್ನಿಸದೆ ನಂಬುವ ಮುಗ್ಧತೆಯ ಪರಿಣಾಮ.

## ಬಹುಮಾನಿತ ಪ್ರಶ್ನೆ

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ಸಹನೆ ಇಲ್ಲದಿದ್ದರೆ ಏನಾಗುತ್ತದೆ ಸಾರ್?
ಬಿಪಿ, ಡಯಾಬಿಟಿಸ್ ತಜ್ಞರಿಗೆ ವ್ಯಾಪಾರವಾಗುತ್ತದೆ.

ಎಚ್.ಕೆ. ವಿಜಯಕುಮಾರ್, ಶಕ್ತಿನಗರ
ಕೊರೊನಾ ಗೆದ್ದವನ ದೇಹಕ್ಕೆ ಮತ್ತೊಮ್ಮೆ ವೈರಸ್! ಏಕೆ ಹೀಗೆ ರಾಮ್?
ಆತಿಥ್ಯ ಚೆನ್ನಾಗಿರುವವರ ಮನೆಗೇ ಅತಿಥಿಗಳು ಪದೇ ಪದೇ ಹೋಗುವುದು ಅನ್ಯಾಯವಲ್ಲ, ಅಭ್ಯಾಸ.

ಆಶಾರಾಣಿ, ಊರಿಲ್ಲ
2020ನೇ ಇಸವಿಯನ್ನು ಭವಿಷ್ಯದಲ್ಲಿ ಏನೆಂದು ನೆನೆಸಿಕೊಳ್ಳಬಹುದು?
ಮಾಧ್ಯಮಗಳು ಮರಿಯನ್ನು ಮಾರಿಯೆಂದು ಪರಿಚಯಿಸಿದ ವರ್ಷ ಎಂದು.

ಕಾವ್ಯಶ್ರೀ ಪತ್ರಿಮಠ, ಸುರಪುರ
‘ಸಮಯಪ್ರಜ್ಞೆ’ ಮೂಡುವುದು ಯಾವಾಗ?



ಅದರಿಂದ ತನಗೆ ಒಳ್ಳೆಯ ಲಾಭ ಇರುವಾಗ.

ಎಸ್.ಸಿ. ರಮೇಶ್, ಮೈಸೂರು
ಮನೆಯಲ್ಲಿರುವ ವಿಶ್ವಾಸಘಾತುಕ ಶಕ್ತಿಗಳನ್ನು ಗುರುತಿಸುವುದು ಹೇಗೆ?
ಮನೆಹಾಳರ ಚೆಹರೆಪಟ್ಟಿಯನ್ನು ಹೊಂದಿರುವ ಧಾರಾವಾಹಿಯ ಸ್ಕ್ರಿಪ್ಟ್ ರೈಟರನ್ನು ಸಂಪರ್ಕಿಸಿ.

ರಾಮಮೂರ್ತಿ, ಊರಿಲ್ಲ
ಹುಡುಗ, ಹುಡುಗಿ ಎಂದು ಹೇಳುವುದಕ್ಕೆ ಬದಲಾಗಿ ಗಂಡು ಹುಡುಗ, ಹೆಣ್ಣು ಹುಡುಗಿ ಎನ್ನುವುದೇಕೆ?
ತತ್ ತ್ವಮ್ ಅಸಿ (ಅದು ನೀನೇ ಆಗಿದ್ದೀಯೆ) ಎಂದು ದೃಢೀಕರಿಸಲು.

■ **ರಾಮ್**

ಪ್ರಶ್ನೆ ಕಳುಹಿಸಲು: **editorsu@sudha.co.in**